Arya Matha Sanjivini Series, 1.

ಆರ್ಯಮತಸಂಜೀವಿನಿ.

# ಉಪನ್ಯಾಸ ಶ್ರೇಣಿಕೆ
# ಮತ್ತು
# ಹಿತೋಕ್ತಿಗಳು

ಪಾಠಶಾಲೆಗಳ ಉಪಯೋಗಕ್ಕಾಗಿ

ವಿರಚಿತವಾದದ್ದು.

Edited and published

*by*

M. A. RAMANUJA IYENGAR,

HOSA AGRAHARAM, MYSORE.

ಮೈಸೂರು: ಸದ್ವಿದ್ಯಾಮಂದಿರಮುದ್ರಾಶಾಲೆಯಲ್ಲಿ

ಮುದ್ರಿಸಲ್ಪಟ್ಟಿತು

೧೮೯೦.

*( All rights reserved by the publisher. )*
Registered according to act XXV 1867.

# ಉಪನ್ಯಾಸಶ್ರೇಣಿಕೆ.

೧

ಈ ಚರಾಚರಾತ್ಮಕವಾದ ಪ್ರಪಂಚದಲ್ಲಿ,

" ಭೂತಾನಾಂ ಪ್ರಾಣಿನಃ ಶ್ರೇಷ್ಠಾಃ । ತೇಷಾಂಬುದ್ಧ್ಯು
ಪಜೀವಿನಃ ಬುದ್ಧಿಮತ್ಸುನರಾಶ್ಶ್ರೇಷ್ಠಾಃ ॥ "

ಭೂತಗಳಲ್ಲಿ ಪ್ರಾಣಿಗಳೇ ಶ್ರೇಷ್ಠವು, ಅವುಗಳಲ್ಲಿ ಬುದ್ಧಿಯಿಂದ ಜೀವಿಸತಕ್ಕವುಗಳು ಶ್ರೇಷ್ಠವು, ಅಂಥಾ ಬುದ್ಧಿಯಿಂದ ಜೀವಿಸತಕ್ಕ ಪ್ರಾಣಿಗಳಲ್ಲಿ ಮನುಷ್ಯರು ಶ್ರೇಷ್ಠರು, ಎಂದೂ,

" ದುರ್ಲಭೋ ಮಾನುಷೋದೇಹಃ "

ಮನುಷ್ಯದೇಹವು ಅತ್ಯಂತದುರ್ಲಭವಾದದ್ದೆಂದೂ, ಹೇಳಿರುವ ಹಾಗೆ ಮಿಕ್ಕ ಎಲ್ಲಾಪ್ರಾಣಿಗಳಿಗಿಂತಲೂ ವಿಶೇಷವಾದ ಜ್ಞಾನವನ್ನು ಹೊಂದಿರುವರಾದ್ದರಿಂದಲೂ, ಇದು ಮಾಡತಕ್ಕದ್ದು ಇದು ಮಾಡತಕ್ಕದ್ದಲ್ಲವು ಎಂಬ ತ್ಯಾಜ್ಯೋಪಾದೇಯ ವಿವೇಕವುಳ್ಳವರಾದ್ದರಿಂದಲೂ, ಅದಕ್ಕೆ ಅನುಕೂಲವಾದ ಕರಚರಣಾದ್ಯವಯವಗಳುಳ್ಳವರಾದ್ದರಿಂದಲೂ, ಮನುಷ್ಯರೇ ಶ್ರೇಷ್ಠರೆಂಬುವದು ಸಿದ್ಧವು.

ಆದರೆ ತಮ್ಮತಮ್ಮ ಪೂರ್ವಪೂರ್ವ ಜನ್ಮದಲ್ಲಿ ಮಾಡಿದ ಕರ್ಮಕ್ಕೆ ಫಲರೂಪವಾಗಿ ಭಗವಂತನಿಂದ ಕೊಡಲ್ಪಟ್ಟಜನ್ಮಗಳಲ್ಲಿ ನರಜನ್ಮವೆತ್ತಿದವರಲ್ಲಿ ತ್ಯಾಜ್ಯೋಪಾದೇಯ ವಿವೇಕವುಳ್ಳವರಾಗಿಯೂ, ಭಗವಂತನ ಅನುಗ್ರಹದಿಂದ ತಮಗೆ ದೊರಕಿದ ಜ್ಞಾನಬಲದಿಂದ ಸತ್ಕರ್ಮಗಳನ್ನು ಮಾಡುತ್ತಾ ಸದಾಚಾರಸಂಪನ್ನರಾಗಿಯೂ, ತನ್ಮೂಲಕ ಉತ್ತರೋತ್ತರಶ್ರೇಯಸ್ಸನ್ನು ಅನುಭವಿಸತಕ್ಕವರಾಗಿಯೂ ಇದ್ದುಕೊಂಡು, ಸನ್ಮಾರ್ಗದಲ್ಲಿ ನಡೆಯುವದಲ್ಲದೆ ಇತರರಿಗೆ ಹಾಗೆಯೇ ಶ್ರೇಯಸ್ಸಾಧನವಾದ ಮಾರ್ಗವನ್ನು ಬೋಧಿಸುವವರಾಗಿಯೂ ಇರುವ ಮಹನೀಯರು ಅತ್ಯುತ್ತಮರು.

ಹೀಗಿರಲು ನಮ್ಮ ಬುದ್ಧಿಗೂ ಯೋಗ್ಯತೆಗೂ ಅನುಕೂಲವಾಗಿರುವಂತೆ ಸತ್ಕರ್ಮಗಳನ್ನು ಮಾಡುತ್ತಾ ವಿವೇಕಶಾಲಿಗಳಾಗಿ ಇದ್ದುಕೊಂಡು, ಉತ್ತರೋತ್ತರ ಶ್ರೇಯಸ್ಸನ್ನು ಪಡೆಯಬೇಕೆಂಬ ಆಸ

ಕ್ತಿಯನ್ನು ನಾವು ತೊರೆದುಬಿಟ್ಟಲ್ಲಿ, ಪೂರ್ವಸುಕೃತಫಲದಿಂದ ಸಂಪಾದಿಸಿದ ಈ ಮನುಷ್ಯಜನ್ಮಕ್ಕೆ ಸಾಫಲ್ಯವಿಲ್ಲದೇಹೋಗುವದೊಂದಲ್ಲದೆ, ತನ್ನ ನಿರುಪಾಧಿಕ ಕೃಪೆಯಿಂದ ಇತರ ಪ್ರಾಣಿವಿಲಕ್ಷಣವಾದ ಜ್ಞಾನಶಕ್ತ್ಯಾದಿಗಳನ್ನೂ, ತದನುಕೂಲವಾದ ಕರಚರಣಾದ್ಯಂಗಗಳನ್ನೂ ಪರಮಸುಖವನ್ನು ಹೊಂದಬೇಕೆಂದು ನಮಗೆ ಕೊಟ್ಟು ಸಲಹಿದ ಭಗವಂತನ ಅಭಿಪ್ರಾಯವನ್ನು ಈಡೇರಿಸದೆ ದ್ರೋಹಮಾಡಿದಂತೆ ಆಗುವದು. ಆದ್ದರಿಂದ ಸ್ವಬುದ್ಧಿ ಕರಚರಣಾದ್ಯನುಗುಣವಾಗಿ ಸತ್ಕರ್ಮಗಳನ್ನಾಚರಿಸುತ್ತಾ, ತತ್ವಜ್ಞಾನವನ್ನು ಸಂಪಾದಿಸಿ, ತನ್ಮೂಲಕ ಶ್ರೇಯಸ್ಸನ್ನು ಹೊಂದುವದು ಸಕಲರಿಗೂ ಕರ್ತವ್ಯವಾದದ್ದು. ಹೀಗಿರುವದರಿಂದ ತತ್ವಜ್ಞಾನಸಂಪಾದನೆಯು ಸಕಲ ಶ್ರೇಯಸ್ಸಿಗೂ ಕಾರಣವೆಂಬುವದು ಶಾಸ್ತ್ರಸಮ್ಮತವಾದ್ದು.

ಹೀಗೆತತ್ವಜ್ಞಾನವುಂಟಾಗುದವಕ್ಕೆ ಪ್ರಮಾಣಪ್ರಮೇಯಗಳ ಸ್ವರೂಪಜ್ಞಾನವುಅವಶ್ಯಕವಾಗಿರುವದು. ಅದರಲ್ಲಿ ಪ್ರಮೆಯವೆಂದರೆ, ತಿಳಿಯತಕ್ಕವಸ್ತು. ಪ್ರಮಾಣವೆಂದರೆ, ಇಂಥಾ ತಿಳಿಯಬೇಕಾದ ವಸ್ತುಗಳ ಸ್ವರೂಪವನ್ನು ಬೋಧಿಸುವ ಸಾಧನಗಳು. ಆ ಪ್ರಮಾಣಗಳು ಪ್ರತ್ಯಕ್ಷವೆಂದೂ, ಅನುಮಾನವೆಂದೂ, ಉಪಮಾನವೆಂದೂ, ಶಬ್ದವೆಂದೂ, ನಾಲ್ಕು ವಿಧವಾಗಿರುವದು. ಅವುಗಳಲ್ಲಿ ಪ್ರತ್ಯಕ್ಷವೆಂದರೆ, ಕಣ್ಣು ಕಿವಿ ಮೂಗು ನಾಲಿಗೆ ಚರ್ಮಗಳೆಂಬ ಇಂದ್ರಿಯಗಳಿಗೂ ವಸ್ತುಗಳಿಗೂ ಉಂಟಾಗುವ ಸಂಬಂಧದಿಂದ ಹುಟ್ಟುವ ತಿಳಿವು. ಇದು ಚಕ್ಷುಸ್ಸು, ಶ್ರೋತ್ರ, ಘ್ರಾಣ, ರಸನ, ತ್ವತ್ಕು, ಮನಸ್ಸು, ಯೆಂದು ಆರುವಿಧವಾಗಿರುವದು. ಇಂಥಾ ಪ್ರತ್ಯಕ್ಷಜ್ಞಾನಕ್ಕೆ ಕಾರಣಗಳಾದ ಇಂದ್ರಿಯಗಳೇ ಪ್ರತ್ಯಕ್ಷಪ್ರಮಾಣಗಳು. ಇದು ಆರುವಿಧವಾಗಿರುವದು. ಅದು ಹ್ಯಾಗಂದರೆ — ಕಣ್ಣು ತೆರದು ವಸ್ತುವನ್ನು ನೋಡೆ, ಈ ವಸ್ತು ಕಪ್ಪು, ಇದು ಬಿಳಿಪು, ಇದು ದೊಡ್ಡದು, ಇದು ಚಿಕ್ಕದು ಯಂದು ಬಣ್ಣಗಳನ್ನೂ, ಬಣ್ಣ ಉಳ್ಳ ಪದಾರ್ಥಗಳನ್ನೂ, ಪರಿಮಾಣವನ್ನೂ, ಪರಿಮಾಣವುಳ್ಳ ಪದಾರ್ಥಗಳನ್ನೂ, ತೋರ್ಪಡಿಸುವ ಇಂದ್ರಿಯವು ಚಕ್ಷುಸ್ಸೆಂಬುವದು. ಅದರಿಂದ ಕಪ್ಪು ಬಿಳಿಪು ಎಂಬಿವು ಮೊದಲಾಗಿ ಹುಟ್ಟುವ ಜ್ಞಾನವು ಚಾಕ್ಷುಷಪ್ರತ್ಯಕ್ಷವೆಂಬುವದು. ಇದು ಸದ್ದು, ಇದು ನುಡಿ, ಇದು ಅಕ್ಷರವೆಂದು ತೋ

ರ್ವಡಿಸುವ ಇಂದ್ರಿಯವು ಶ್ರೋತ್ರೇಂದ್ರಿಯವು. ಇದರಿಂದ ಇದು ನಾದ, ಇದು ಧ್ವನಿ, ಇದು ಅಕ್ಷರ ಎಂಬಿವು ಮುಂತಾಗಿ ಹುಟ್ಟುವ ತಿಳಿವು ಶ್ರಾವಣ ಪ್ರತ್ಯಕ್ಷವೆನಿಸುವದು. ನಾಲಿಗೆಯಿಂದ ಸವಿಯೆ, ಇದು ಮಧುರ, ಇದು ಹುಳಿ, ಇದು ಉಪ್ಪು, ಎಂದಿವು ಮುಂತಾಗಿ ಹುಟ್ಟುವ ತಿಳಿವು ಜಿಹ್ವಾಪ್ರತ್ಯಕ್ಷವೆನಿಸುವದು. ಇದಕ್ಕೆ ಕಾರಣವಾದ್ದೇ ರಸನೇಂದ್ರಿಯವು. ಮೂಗಿನಿಂದ ಆಘ್ರಾಣಿಸಿನೋಡೆ, ಇದು ಸುವಾಸನೆ, ಇದು ದುರ್ವಾಸನೆ, ಎಂದಿವು ಮುಂತಾಗಿ ಹುಟ್ಟುವ ತಿಳಿವು ಘ್ರಾಣಪ್ರತ್ಯಕ್ಷವೆನಿಸುವದು. ಇದಕ್ಕೆ ಕಾರಣವಾದ ಮೂಗೇ ಘ್ರಾಣೇಂದ್ರಿಯವು. ಮುಟ್ಟಿದರೆ ಇದು ಬಿಸಿಯಾಗಿ ಇರುವದು, ಇದು ತಣ್ಣಗೆ ಇರುವದು ಎಂದಿವು ಮೊದಲಾಗಿ ಹುಟ್ಟುವ ತಿಳಿವು ಸ್ಪಾರ್ಶನ ಪ್ರತ್ಯಕ್ಷವೆಂಬುವದು. ಇದಕ್ಕೆ ಕಾರಣವಾದ ಚರ್ಮವೇ ತ್ವಗಿಂದ್ರಿಯವೆನ್ನುವದು. ಯಾವದಾದರು ಒಂದು ವಸ್ತುವನ್ನು ಅನುಭವಿಸುವಾಗ, ತನಗೆ ಈಗ ಸುಖವಾಗಿರುವದು, ಈಗ ದುಃಖರೂಪವಾಗಿರುವದು, ಇದು ನೋವು, ಇದು ಹಿತ, ಎಂಬಿವು ಮೊದಲಾಗಿ ಹುಟ್ಟುವ ತಿಳಿವು ಮಾನಸ ಪ್ರತ್ಯಕ್ಷವು. ಇದಕ್ಕೆ ಕಾರಣವಾದ ಮನಸ್ಸೆ ಮಾನಸೇಂದ್ರಿಯವು. ಈ ಪ್ರಕಾರವಾಗಿ ಪ್ರತ್ಯಕ್ಷವು ಆರು ಪ್ರಕಾರವಾಗಿರುವದು.

ಅನುಮಾನ ಪ್ರಮಾಣಸ್ವರೂಪ– ನಿಯತವಾಗಿ ಒಂದೇ ಕಡೆಯಲ್ಲಿದ್ದು, ಒಂದು ಬಿಟ್ಟು ಮತ್ತೊಂದು ಅಗಲದಿರುವ ಪದಾರ್ಥಗಳೊಳಗೆ ಒಂದು ವಸ್ತುವನ್ನು ಒಂದು ಸ್ಥಳದಲ್ಲಿ ಕಂಡು ಯಾವಾಗಲೂ ಅದರೊಡನೆ ಇರುವ ಮತ್ತೊಂದು ವಸ್ತುವನ್ನು ಕಾಣದಿದ್ದರೂ ಅದು ಅಲ್ಲೇ ಇದ್ದಿರಬೇಕೆಂದು ನಿಶ್ಚೈಸುವಿಕೆಯೇ ಅನುಮಾನವೆಂಬುವದು. ಹ್ಯಾಗಂದರೆ:– ಬೆಂಕಿಯಿಲ್ಲದೆ ಹೊಗೆ ಇರಲಾರದು. ಬೆಂಕಿಯೂ ಹೊಗೆಯೂ ಯಾವಾಗಲೂ ಒಂದೇ ಕಡೆ ಇರತಕ್ಕವುಗಳೆಂದು ಅಡಿಗೆಮನೆಯಲ್ಲಿ ಇವೆರಡರ ಸಾಹಚರ್ಯವನ್ನು ಕಂಡು, ದೂರದಲ್ಲಿ ಹೊಗೆ ಕಂಡಾಗ ಅಲ್ಲಿ ಬೆಂಕಿ ಇಧೆ ಯೆಂದು ನಿಶ್ಚಯಿಸುವದೇ ಅನುಮಾನಪ್ರಮಾಣವು.

ಉಪಮಾನ ಪ್ರಮಾಣ ಸ್ವರೂಪ– ತಾನು ಅರಿತಿರುವ ಪದಾರ್ಥಗಳ ಹೋಲಿಕೆಯಿಂದ ತಾನು ನೋಡದ ಪದಾರ್ಥವನ್ನು ಪ್ರತ್ಯಕ್ಷ

ಕ್ಕೆ ಸರಿಯಾಗಿ ತಿಳಿದುಕೊಳ್ಳುವಿಕೆಯೇ ಉಪಮಾನಪ್ರಮಾಣವು. ಉದಾಹರಣೆ- ಸಿಂಹವನ್ನು ಎಂದಿಗೂ ನೋಡದೇ ಇರುವ ಒಬ್ಬ ಮನುಷ್ಯನು 'ಸಿಂಹವು ಹ್ಯಾಗೆಇಧೆ?' ಯಂದುಕೇಳಲು ; ಒಬ್ಬ ಮನುಷ್ಯನು ಆಗ ಅಲ್ಲಿ ನಿಂತಿದ್ದ ಜಾಲುನಾಯಿಯನ್ನು ತೋರಿಸಿ, 'ಇದರಂತೆ ಸಿಂಹವಿರುವದು. ಆದರೆ ಅದರ ಮುಖದಸುತ್ತಲೂ ಕೇಸರಗಳಿರುವವು.' ಎಂದು ಹೇಳಿದರೆ ಇವನಿಗೆ ಸಿಂಹಜ್ಞಾನವುಂಟಾಗುವದು.

ಶಾಬ್ದಪ್ರಮಾಣ ಸ್ವರೂಪ- ಇದ್ದದ್ದನ್ನು ಇದ್ದಹಾಗೆಯೇ ತಿಳಿಸುವ ಮಾತು, ಶಾಬ್ದವೆನಿಸುವದು. ಇದು ಲೌಕಿಕವೆಂದೂ ವೈದಿಕವೆಂದೂ ಎರಡು ವಿಧವಾಗಿರುವದು. ಲೌಲಿಕವೆಂಬುವದು ಲೋಕದಲ್ಲಿ ಆಪ್ತರು ಆಡುವ ಮಾತು. ವೈದಿಕವೆಂಬುವದು ವೇದವೇದಾಂಗ ತರ್ಕ ವ್ಯಾಕರಣ ಮೀಮಾಂಸ ಪುರಾಣ, ಧರ್ಮಶಾಸ್ತ್ರಮುಂತಾದ ಹದಿನಾಲ್ಕುವಿದ್ಯೆಗಳು. ಇಲ್ಲಿಗೆ ಪ್ರಮಾಣಪ್ರಮೇಯ ಸ್ವರೂಪಗಳು ನಿರೂಪಿಸಲ್ಪಟ್ಟವು. ಮುಂದೆ ಈ ಪ್ರಮಾಣಗಳಿಗೆ ಸಾರ್ಥಕ್ಯವು ನಿರೂಪಿಸಲ್ಪಡುವದು.

ಪ್ರಮೇಯಜ್ಞಾನವುಂಟಾಗಬೇಕಾದರೆ, ಮೇಲುಹೇಳಿದ ನಾಲ್ಕು ಪ್ರಮಾಣಗಳಿಂದಲೇ. ಕೆಲವುವಸ್ತುಗಳು ಪ್ರತ್ಯಕ್ಷಪ್ರಮಾಣದಿಂದ ತಿಳಿಯಬರುವವು. ಕೆಲವು ಅನುಮಾನದಿಂದ, ಕೆಲವು ಉಪಮಾನದಿಂದ, ಕೆಲವು ಶಬ್ದದಿಂದ ತಿಳಿಯುವವು. ಒಂದರಿಂದಲೇ ಎಲ್ಲಾ ವಿಷಯಗಳನ್ನು ತಿಳಿದುಕೊಳ್ಳುವದಕ್ಕಾಗುವದಿಲ್ಲ. ಪ್ರತ್ಯಕ್ಷಪ್ರಮಾಣವೇ ಸಾಕೆಂದು ಹೇಳಿದ್ದಲ್ಲಿ, ಜ್ಞಾನಕ್ಕೆ ಗೋಚರವಾಗಿರುವ ಎಲ್ಲಾ ವಿಷಯಕ್ಕೂ ಕಾರಣ ಹೇಳಲಾಗದು. ಆದ್ದರಿಂದ ನಮಗೆ ಪ್ರಮಾಣಗಳೆಲ್ಲವೂ ಬೇಕು. ಈ ಪ್ರಮಾಣಗಳಿಗೆ ಉದಾಹರಣೆ. ಪ್ರತ್ಯಕ್ಷಕ್ಕೆ ಮಾವಿನ ಹಣ್ಣು ಮಧುರವಾಗಿಧೆ ಎಂಬುವದನ್ನು ತಿಂದು ತಿಳಿದುಕೊಳ್ಳಬಹುದು. ಪ್ರಪಂಚವು ಘುಟಘುಟಾದಿಗಳ ಹಾಗೆ ಕಾರ್ಯವಾದ್ದರಿಂದ ಸಕರ್ತೃಕವೆಂದು ಅನುಮಾನಪ್ರಮಾಣವು ತಿಳಿಸುವದು. ನಂಜನಗೂಡುರಥವು ಮೇಲುಗೋಟೆರಥದ ಹಾಗೆ ಇರುವದು ಎಂದು ನಂಜನಗೂಡಿಗೆ ಹೋಗದೇ ಇರುವವನಿಗೆ ಹೇಳಿದರೆ, ಅವನಿಗೆ ಆ ರಥಜ್ಞಾನವು ಉಪಮಾನದಿಂದ ಉಂಟಾಗುವದು. ಕೆಲವು ಶಾಸ್ತ್ರಜ್ಞರು ಉಪಮಾನವನ್ನು

ಅನುಮಾನದೊಡನೆಯೂ, ಕೆಲವರು ಶಾಬ್ದದೊಡನೆಯೂ ಸೇರಿಸುವ ರು. ಪ್ರತ್ಯಕ್ಷಾನುಮಾನಗಳಿಂದ ತಿಳಿಯುವದಕ್ಕಾಗದ ವಿಷಯಗಳನ್ನು ಶಬ್ದಪ್ರಮಾಣದಿಂದ ಅರಿಯಬಹುದು. ಎಲ್ಲಿ ಪ್ರತ್ಯಕ್ಷಾನುಮಾನಗಳು ಪ್ರವರ್ತಿಸಲಾರವೋ ಅಂಥಾ ಅದೃಷ್ಟಾಂಶಗಳನ್ನೂ ಕೂಡ ಅದು ತಿಳಿಸುವದಾದ್ದರಿಂದ, ಅದೇ ಪ್ರಬಲಪ್ರಮಾಣವು. ಪ್ರತ್ಯಕ್ಷಾನುಮಾನಗಳಿಂದ ಸಿದ್ಧವಾದ ವಿಷಯಗಳೆಲ್ಲವು ಪ್ರಚಾರಕಾಲದಲ್ಲಿ ಶಬ್ದಪ್ರಮಾಣದಲ್ಲೇ ಪರ್ಯವಸಾನವನ್ನೈದುವದು. ಇತರದೇಶ ವೃತ್ತಾಂತವನ್ನು ನಾವು ಸಾಕ್ಷಾತ್ತಾಗಿ ನೋಡದಿದ್ದರೂ ಆ ದೇಶಗಳ ಚರಿತ್ರಾದಿಗಳಿಂದ ತಿಳಿದುಕೊಳ್ಳುವದಿಲ್ಲವೇ? ಶಾಸ್ತ್ರಜ್ಞರೂ ಕೂಡ "ಪ್ರಮಾಣಗಳಲ್ಲಿ ಇಂದ್ರಿಯಕ್ಕೆ ಸನ್ನಿಹಿತವಾದ ಪದಾರ್ಥಗಳನ್ನು ಪ್ರತ್ಯಕ್ಷಪ್ರಮಾಣವು ಗ್ರಹಿಸುವದಾದ್ದರಿಂದಲೂ; ಅನುಮಾನಪ್ರಮಾಣವು ಸ್ಥಳಾಂತರದಲ್ಲಿರುವ ಇಂದ್ರಿಯಕ್ಕೆ ಗೋಚರವಾಗತಕ್ಕ ಪದಾರ್ಥಗಳನ್ನೂ ಮಿಕ್ಕ ಸೂಕ್ಷ್ಮಪದಾರ್ಥಗಳನ್ನೂ ಗ್ರಹಿಸತಕ್ಕದ್ದಾದರೂ, 'ತರ್ಕಾಪ್ರತಿಷ್ಠಾನ್ಯಾಯಾತ್' ಎಂದು, ಸೂತ್ರಕಾರರು ಉದಹರಿಸುವಂತೆ ಮಿತಿಯಿಲ್ಲದೆ, ವಿಷಯಕ್ಕೆ ವಿಶ್ರಾಮವನ್ನು ತೋರಿಸದೆ, ಪ್ರವಚನಶಕ್ತ್ಯನುಗುಣವಾಗಿ ಬೆಳೆಯುತ್ತ, ಯಥಾವಸ್ಥಿತಾಂಶಬೋಧಕವಲ್ಲವಾದ್ದರಿಂದಲೂ; ಶಬ್ದಪ್ರಮಾಣದೊಳಗೆ ಹೇಳುವವರ ಆಪ್ತತೆಯಿಂದಲೇ ನಮಗೆ ಪ್ರಾಮಾಣ್ಯಉಂಟಾಗುವದರಿಂದಲೂ; ಶಬ್ದಪ್ರಮಾಣವೇ ಪ್ರಬಲವಾದದ್ದು." ಎಂದು ನಿರೂಪಿಸುವರು. ಈ ಶಬ್ದಪ್ರಮಾಣಗಳಿಗೆ ಲೋಕದಲ್ಲಿ ಅಷ್ಟಾದಶವಿದ್ಯೆಗಳೆಂದು ಪ್ರಸಿದ್ಧಿಯುಂಟು.

ಆ ಅಷ್ಟಾದಶವಿದ್ಯೆಗಳ ಸ್ವರೂಪ— ಆ ಹದಿನೆಂಟು ವಿದ್ಯೆಗಳು ಯಾವವೆಂದರೆ. ವೇದಗಳು ನಾಲ್ಕು, ವೇದಾಂಗಗಳು ಆರು, ತರ್ಕ, ಮೀಮಾಂಸೆ, ಪುರಾಣ, ಧರ್ಮಶಾಸ್ತ್ರ, ಆಯುರ್ವೇದ, ಧನುರ್ವೇದ, ಗಾಂಧರ್ವ ಎಂದು ಹದಿನೆಂಟು ವಿದ್ಯೆಗಳು ಇರುವವು. ಅವುಗಳಲ್ಲಿ ಋಕ್, ಯಜುಸ್, ಸಾಮ, ಅಥರ್ವಣಗಳೆಂಬ ನಾಲ್ಕು ವೇದಗಳೂ ಪೂರ್ವಭಾಗದಲ್ಲಿ ಧರ್ಮಾರ್ಥಕಾಮಗಳೆಂಬ ತ್ರಿವರ್ಗಕ್ಕೆ ಸಾಧನವಾಗಿ ಶುಭ ಕರ್ಮಗಳನ್ನು ಹೇಳುವವು; ಉತ್ತರಭಾಗದಲ್ಲಿ ಭಗವಂತನ ಸ್ವರೂಪ, ಗುಣ, ರೂಪ, ವಿಭವಾದಿಗಳನ್ನು ಹೇಳುವವಲ್ಲದೆ

ಮೋಕ್ಷಕ್ಕೆ ಉಪಾಯವನ್ನೂ ಹೇಳುವವು. ಈ ಉತ್ತರಭಾಗಕ್ಕೆ ವೇದಾಂತ ಅಥವಾ ಉಪನಿಷತ್ತುಗಳು ಎಂದು ಹೆಸರು. ಶಿಕ್ಷೆ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪಗಳೆಂಬುವುಗಳು ವೇದಾಂಗಗಳು. ಅವುಗಳಲ್ಲಿ ಶಿಕ್ಷೆ ಎಂಬುವದು ಸ್ವರ, ವರ್ಣ, ಮಾತ್ರೆ, ಇವುಗಳ ಸ್ವರೂಪವನ್ನೂ ಉಪಯೋಗವನ್ನೂ ತೋರಿಸುವದು. ವ್ಯಾಕರಣವೆಂಬುವದು ಪ್ರಕೃತಿ ಪ್ರತ್ಯಯಾದಿಗಳ ಮೂಲಕ ಅರ್ಥವನ್ನು ಕಂಡುಹಿಡಿಯುವ ರೀತಿಯನ್ನು ತಿಳಿಸುವದು. ಛಂದಸ್ಸೆಂಬುವದು ಗಾಯತ್ರಿ, ತ್ರಿಷ್ಟುಪ್, ಮೊದಲಾಗಿರುವ ವೃತ್ತಗಳ ಲಕ್ಷಣಗಳನ್ನು ನಿರೂಪಿಸುವದು. ಕಲ್ಪಸೂತ್ರವು ವೇದೋಕ್ತವಾದ ಕರ್ಮಗಳ ಪ್ರಯೋಗವನ್ನು ಹೇಳುವದು. ಜ್ಯೋತಿಷವು ಗ್ರಹನಕ್ಷತ್ರಾದಿಗಳ ವಿಷಯವನ್ನು ಹೇಳಿ, ವೇದೋಕ್ತಕರ್ಮಾಚರಣಕ್ಕೆ ಕಾಲವನ್ನು ನಿರೂಪಿಸುವದು. ಇವುಗಳಿಗೆ ವೇದಾಂಗಗಳೆಂದು ಹೆಸರು ಬರುವದಕ್ಕೆ ಕಾರಣವೇನಂದರೆ- ಪೂರ್ವಿಕರು ವೇದಗಳನ್ನು ಒಬ್ಬ ಪುರುಷನಂತೆ ಭಾವಿಸಿ, ಆವೇದಪುರುಷನಿಗೆ ಛಂದಸ್ಸುಪಾದಗಳಹಾಗೂ, ಕಲ್ಪಸೂತ್ರಗಳು ಕೈಗಳಹಾಗೂ, ವ್ಯಾಕರಣ ಮುಖದಹಾಗೂ, ಶಿಕ್ಷೆ ಮೂಗಿನಹಾಗೂ, ಜ್ಯೋತಿಷ ಕಣ್ಣುಗಳಹಾಗೂ, ನಿರುಕ್ತವು ಕಿವಿಗಳಹಾಗೂ ಇರುವದರಿಂದ ಅವುಗಳಿಗೆ ವೇದಾಂಗಗಳೆಂಬ ಹೆಸರನ್ನು ಕೊಟ್ಟರು. ತರ್ಕಶಾಸ್ತ್ರವು ಪ್ರಮಾಣಗಳ ಸ್ವರೂಪವನ್ನು ಹೇಳಿ, ಅವುಗಳಮೂಲಕ ಯುಕ್ತಿಗಳಿಂದ ವೇದಗಳಲ್ಲಿ ಹೇಳಿರುವ ಅರ್ಥಗಳನ್ನು ನೆಲೆಗೊಳಿಸುದು. ಮೀಮಾಂಸೆಯು ಪೂರ್ವಪಕ್ಷಸಿದ್ಧಾಂತಗಳಿಂದ ವಿಚಾರಿಸಿ ವೇದಾರ್ಥಗಳನ್ನು ನಿಶ್ಚಯಮಾಡುವದು. ಇದು ಪೂರ್ವಮೀಮಾಂಸೆ ಉತ್ತರಮೀಮಾಂಸೆಯೆಂದು ಎರಡುವಿಧ. ಇವರಲ್ಲಿ ಪೂರ್ವಮೀಮಾಂಸೆ ಕರ್ಮಪರವಾಗಿರುವದು, ಉತ್ತರಮೀಮಾಂಸೆ ಜ್ಞಾನಪರವಾಗಿರುವದು. ಪುರಾಣಗಳು ಜಗತ್ಸೃಷ್ಟಿಸಂಹಾರಗಳನ್ನೂ, ಮನ್ವಂತರಗಳನ್ನೂ, ರಾಜವಂಶವನ್ನೂ, ಆಯಾ ವಂಶಗಳಲ್ಲಿ ಹುಟ್ಟಿದವರ ಚರಿತ್ರೆಯನ್ನೂ, ಹೇಳುವವು. ಇವು ಹದಿನೆಂಟು ಇರುವವು. ಇವು ಪುನಹ ಸಾತ್ವಿಕ ರಾಜಸತಾಮಸಗಳೆಂದು ಮೂರಾಗಿ ವಿಭಾಗಿಸಲ್ಪಟ್ಟಿರುವವು. ಧರ್ಮಶಾಸ್ತ್ರವು ಆಚಾರ, ವ್ಯವಹಾ

ರ, ಪ್ರಾಯಶ್ಚಿತ್ತಗಳನ್ನು ಹೇಳುವದು; ಇದು ಮನುಸ್ಮೃತಿಯೇ ಮೊದಲಾಗಿ ಹದಿನೆಂಟು ಇರುವದು. ಆಯುರ್ವೇದವು ವ್ಯಾಧಿಸ್ವರೂಪ, ಅವುಗಳಿಗೆ ಮಾಡತಕ್ಕ ಚಿಕಿತ್ಸೆ ಇವುಗಳನ್ನು ನಿರೂಪಿಸುವದು. ಧನುರ್ವೇದವು ಅಸ್ತ್ರಶಸ್ತ್ರಗಳನ್ನೂ, ಅವುಗಳ ಪ್ರಯೋಗೋಪಸಂಹಾರಗಳನ್ನೂ ತಿಳಿಸುವದು. ಗಾಂಧರ್ವವಿದ್ಯೆಯು ನೃತ್ತಗೀತವಾದ್ಯಗಳನ್ನು ನಿರೂಪಿಸುವದು. ಅರ್ಥಶಾಸ್ತ್ರವೆಂಬುವದು ಪ್ರಜಾಪರಿಪಾಲನಾದಿ ರಾಜನೀತಿಗಳನ್ನು ನಿರೂಪಿಸುವದು. ಇವುಗಳಲ್ಲಿ ಕೆಲವು ಆಮುಷ್ಮಿಕ ಸುಖಸಂಪಾದನೆಗೂ ಮತ್ತು ಕೆಲವು ಐಹಿಕ ಸುಖಸಂಪಾದನೆಗೂ ಉಪಯೋಗಿಸುವವು. ಪರೋಕ್ಷ ಸುಖಸಂಪಾದನಗೆ ಮುಖ್ಯವಾಗಿರುವದು ವೇದ. ಅದರಸ್ವರೂಪಬೋಧನೆಗಾಗಿ ವೇದಾಂಗಗಳು ಇರುವವು. ಆ ವೇದಗಳ ಅರ್ಥವು “ಬಿಭೇತಿಗಹನಾಚ್ಛಾಸ್ತ್ರಾತ್ ನರಸ್ತ್ರೀವ್ಯಾದಿವೌಷಧಾತ್” ಎಂಬಂತೆ ಅಲ್ಪಪ್ರಜ್ಞರಾದ ನಮ್ಮಗಳಿಗೆ ದುರವಗಾಹವೆಂದೆಣಿಸಿ ವೇದವ್ಯಾಸರೇ ಮೊದಲಾದ ಮಹರ್ಷಿಗಳು ವೇದಾರ್ಥಗಳಿಗೆ ಉಪಬೃಹ್ಮಣಗಳಾಗಿ ಪುರಾಣೇತಿಹಾಸಗಳನ್ನು ನಿರ್ಮಿಸಿದ್ದರಿಂದ, ಅವುಗಳೂ ವೇದಗಳ ಜೊತೆಗೆ ಸೇರುವವು. ಮೀಮಾಂಸೆಯೂ ವೇದಕ್ಕೆ ಸೇರಿದ್ದು. ಧರ್ಮಶಾಸ್ತ್ರಗಳೂ ಕೂಡ ವೇದಾರ್ಥಗಳನ್ನು ವಿವರಿಸುವದರಿಂದ ವೇದಗಳ ಗುಂಪಿಗೆ ಸೇರಿದವುಗಳು. ಆದ್ದರಿಂದ—

“ಅಂಗಾನಿವೇದಾಶ್ಚತ್ವಾರೋ ಮೀಮಾಂಸಾನ್ಯಾಯವಿಸ್ತರಃ ||
ಪುರಾಣಂ ಧರ್ಮಶಾಸ್ತ್ರಂಚ ವಿದ್ಯಾಹ್ಯೇತಾಶ್ಚತುರ್ದಶ ||”

ಎಂಬ ಹದಿನಾಲ್ಕು ವಿದ್ಯೆಗಳೂ ಆಮುಷ್ಮಿಕ ಸುಖಸಾಧನಕ್ಕಾಗಿಯೇ ಹುಟ್ಟಿರುವವು. ಮಿಕ್ಕ ವಿದ್ಯೆಗಳು ಐಹಿಕಸುಖಸಂಪಾದನೆಯನ್ನು ತಿಳಿಸುವದಕ್ಕಾಗಿಯೇ ಉಂಟಾಗಿರುವವು.

ಇಂತು ಪ್ರಮಾಣಸ್ವರೂಪವು ಸ್ವಲ್ಪಮಟ್ಟಿಗೆ ಹೇಳಲ್ಪಟ್ಟಿತು. ಇದರಿಂದ ಶಾಸ್ತ್ರಗಳ ಸ್ವರೂಪವೂ ಅವುಗಳು ಹುಟ್ಟಿದ್ದಕ್ಕೆ ಪ್ರಯೋಜನವೂ ತಿಳಿಸಲಾಯಿತು.

“ಯುಕ್ತಿಯುಕ್ತಂ ವಚೋಗ್ರಾಹ್ಯಂ ಬಾಲಾದಪಿ ಶುಕಾದಪಿ”

ಈ ವಿಷಯಗಳೆಲ್ಲವನ್ನು ವಿಶೇಷವಾಗಿ ತಿಳಿದುಕೊಂಡು ಉತ್ತರೋತ್ತರ ಶ್ರೇಯಸ್ಸಂಪಾದನೆಯನ್ನು ಮಾಡುವದರಲ್ಲಿ ಪ್ರವರ್ತಿಸುವದು ಅತ್ಯವಶ್ಯಕವಾಗಿ ತೋರಿಬರುವದರಿಂದ ಈ ಉಪನ್ಯಾಸವನ್ನೇ ಉಪೋದ್ಘಾತವಾಗಿ ಇಟ್ಟುಕೊಂಡು ಅಲ್ಲಲ್ಲಿ ಪಂಡಿತರು ಉಪನ್ಯಸಿಸಿದ ವಿಷಯಗಳನ್ನು ಸಂಗ್ರಹಿಸಿ ದೊರಕಿದಹಾಗೆ ಪ್ರಕಟಿಸುತ್ತಾ ಬರುವೆವು.

* *
*

## ಹಿತೋಕ್ತಿಗಳು.

ಶ್ಲೋ॥ ಅರ್ಕಃ ಸ್ವಕರಸಂಪರ್ಕಾತ್ ದಿವಾಹಂತಿಬಹಿಸ್ತಮಃ॥
ಸಂತಸ್ತುದರ್ಶನಾದೇವ ಬಹಿರಂತಃ ದಿವಾನಿಶಂ॥ ೧ ॥

ಟೀಕು– ಸೂರ್ಯನು ಹಗಲಲ್ಲಿ ಹೊರಗಿರುವ ಅಂಧಕಾರವನ್ನು ತನ್ನ ಕರಗಳಿಂದ (ಕಿರಣ) ಮುಟ್ಟಿ ಹೋಗಲಾಡಿಸುವನು. ಸತ್ಪುರುಷರಾದರೋ ಹಗಲು ರಾತ್ರಿ ಈ ಯರಡುವೇಳೆಯಲ್ಲಿಯೂ ಹೊರಗಿರುವ ತಮಸ್ಸನ್ನು ಮಾತ್ರವೆ ಅಲ್ಲ, ಒಳಗಿರುವ ತಮಸ್ಸನ್ನೂ (ಅಜ್ಞಾನ) ಕೂಡ ದರ್ಶನಮಾತ್ರದಿಂದಲೇ ಹೋಗಲಾಡಿಸುತ್ತಾರೆ. ಸತ್ಪುರುಷರ ಪರಿಚಯ ಉಂಟಾದ ಕೂಡಲೆ ನಮ್ಮ ಅಜ್ಞಾನವೆಲ್ಲವೂ ತೊಲಗುವದೆಂದು ತಾತ್ಪರ್ಯ.

ಶ್ಲೋ॥ ಯಾಂತಿನ್ಯಾಯಪ್ರವೃತ್ತಸ್ಯತಿರ್ಯಂಚೋಪಿಸಹಾಯತಾಂ।
ಅಪಂಥಾನಂತುಗಚ್ಛಂತಂಸೋದರೋಪಿವಿಮುಂಚತಿ॥ ೨ ॥

ಟೀಕು— ಒಳ್ಳೇ ನಡತೆಯಲ್ಲಿರುವವನಿಗೆ ಬುದ್ಧಿಹೀನಗಳಾದ ಮೃಗಾದಿಗಳೂ ಕೂಡ ಸಹಾಯಮಾಡುವವು. ಆದರೆ ಕೆಟ್ಟನಡತೆಯಲ್ಲಿರುವವನನ್ನು ಒಡಹುಟ್ಟಿದವರೂ ಕೂಡ ತ್ಯಜಿಸುವರು. ಶ್ರೀರಾಮನು ಸನ್ಮಾರ್ಗದಲ್ಲಿ ನಡದದ್ದರಿಂದ ವಾಲಿಸುಗ್ರೀವರೇ ಮೊದಲಾದ ಕಪಿಗಳೂ, ಜಾಂಬುವಂತನೇಮೊದಲಾದ ಕರಡಿಗಳೂ, ಜಟಾಯುವೆಂಬ ಪಕ್ಷಿಯೂ ಸಹಾಯಮಾಡಲಿಲ್ಲವೆ? ರಾವಣಾಸುರನ ದುರ್ನಡತೆಯನ್ನು ನೋಡಿ ಸಹೋದರನಾದ ವಿಭೀಷಣನು ಯುದ್ಧಕಾಲದಲ್ಲಿ ಆತನನ್ನು ಬಿಟ್ಟುಬಿಡಲಿಲ್ಲವೆ?

## ಹಿತೋಕ್ತಿಗಳು.

ರಾಜನ್ ಸರ್ಷಪಮಾತ್ರಾಣಿ ಪರಚ್ಛಿದ್ರಾಣಿ ಪಶ್ಯಸಿ ॥
ಆತ್ಮನೋಮೇರುಮಾತ್ರಾಣಿ ಪಶ್ಯನ್ನಪಿ ನಪಶ್ಯಸಿ ॥ ೩ ॥

ಶಕುಂತಳೆಯು ದುಷ್ಯಂತನನ್ನು ಕುರಿತು– 'ಎಲೈ, ರಾಜನೇ, ಸಾಸಿವೆಕಾಳಷ್ಟು ಸಣ್ಣವಾದ ಇತರರ ದೋಷಗಳನ್ನು ನೋಡುತ್ತೀಯೆ. ಮೇರುಪರ್ವದಷ್ಟು ದೊಡ್ಡದಾಗಿರುವ ನಿನ್ನಲ್ಲಿರುವ ತಪ್ಪುಗಳನ್ನು ನೀನು ನೋಡುತ್ತಿದ್ದರೂ ನಿನಗೆ ಕಾಣುವದಿಲ್ಲ' ಎಂದು ಹೇಳುತ್ತಾಳೆ. * ಇತರರ ದೋಷಗಳನ್ನೇ ಎಣಿಸಿ, ತನ್ನ ದೋಷಗಳನ್ನು ಮನನಮಾಡದೆ ತಾನು ದೊಡ್ಡವನೆಂದು ಭಾವಿಸುವದು ಮನುಷ್ಯನ ಸ್ವಭಾವ. ಆದ್ದರಿಂದ ಅಂಥಾ ಸ್ವಭಾವನ್ನು ಬಿಡಬೇಕೆಂದು ತಾತ್ಪರ್ಯ.

ಖನನ್ನಾಖುಬಿಲಂ ಸಿಂಹಃ ಪಾಷಾಣಶಕಲಾಕುಲಂ । ಪ್ರಾ
ಪ್ನೋತಿ ನಖಭಂಗಂವಾ ಫಲಂವಾ ಮೂಷಕೋಭವೇತ್ ॥೪॥

ಟೀಕು– ಸಿಂಹವು ಕಲ್ಲುಗಳಿಂದ ನಿಬಿಡವಾದ ಇಲಿಯ ಬಿಲವನ್ನು ಕೊರೆಯುವಲ್ಲಿ ತನ್ನ ಉಗುರು ಹಾಳುಮಾಡಿಕೊಳ್ಳುತ್ತದೆ. ಅಲ್ಲದೆ ತಾನು ಪಟ್ಟಶ್ರಮಕ್ಕೆ ಫಲವಾಗಿ ಬಂದು ಇಲಿಯನ್ನು ಹೊಂದುತ್ತದೆ. ಸಿಂಹವು ಹಸಿವಿನಿಂದ ಇಲಿಯ ಬಿಲವನ್ನು ತೋಡಿದರೆ, ಆಹಾರಸಂಪಾದನೆಗೆ ಅತ್ಯವಶ್ಯಕವಾದ ಉಗುರೂ ಹೋಗುವದು, ಅದರ ಹಸಿವೂ ತೀರುವದಿಲ್ಲ. ಇದರಿಂದ ಮನುಷ್ಯನು ಮೊದಲು ಯೋಚಿಸಿ, ಬಳಿಕ ತನ್ನ ಯೋಗ್ಯತೆಗೆ ತಕ್ಕ ಕೆಲಸವನ್ನು ಮಾಡಲಿಕ್ಕೆ ಆರುಭಿಸ ಬೇಕು, ಎಂದು ತಾತ್ಪರ್ಯ ಬರುತ್ತದೆ.

"ಶತಾಯುರ್ವೈಪುರುಷಃ । ವಿಭಜ್ಯಕಾಲಮನ್ಯೋನ್ಯಾನುಬದ್ಧಂ ಪರಸ್ಪರಾನುಪಘಾತಕಂ ತ್ರಿವರ್ಗಂ ಸೇವೇತ । ಬಾಲ್ಯೆವಿದ್ಯಾಗ್ರಹಣಾದೀನ್ । ಅರ್ಥಾನ್ ಕಾಮಂಚ ಯೌವನೇ । ಸ್ಥಾವಿರೆ ಧರ್ಮಂ ಮೋಕ್ಷಂಚ । ಅನಿತ್ಯತ್ವಾದಾಯುಷಃ ಯಥೋಪಪಾದಂ ವಾ ಸೇವೇತ ॥ ೫ ॥"

ಟೀಕು– ಮನುಷ್ಯನಿಗೆ ಆಯುಸ್ಸು ನೂರುವರುಷ. ಕಾಲವ

ನ್ನು ವಿಂಗಡಿಸಿಕೊಂಡು, ಒಂದಕ್ಕೊಂದು ಸೇರಿಕೊಂಡಿರುವಹಾಗೂ ಪರಸ್ಪರ ವಿರೋಧವಿಲ್ಲದಹಾಗೂ ಧರ್ಮಾರ್ಥ ಕಾಮಗಳೆಂಬ ಮೂರು ಪುರುಷಾರ್ಥಗಳನ್ನು ಸಂಪಾದಿಸಬೇಕು. ಬಾಲ್ಯದಲ್ಲಿ ವಿದ್ಯವನ್ನೂ ; ಪ್ರಾಯಕಾಲದಲ್ಲಿ ಹಣವನ್ನೂ ಸುಖವನ್ನೂ ; ಮುಪ್ಪಿನಲ್ಲಿ ಧರ್ಮವನ್ನೂ ಮೋಕ್ಷವನ್ನೂ ಸಂಪಾದಿಸಬೇಕು. ನಮಗೆ ಸಾವುಬರುವಕಾಲವು ಗೊತ್ತಿಲ್ಲದ್ದರಿಂದ, ಈ ಮೂರು ಅವಸ್ಥೆಗಳಲ್ಲಿಯೂ ಧರ್ಮಾರ್ಥಕಾಮಗಳನ್ನು ಕೈಲಾದಮಟ್ಟಿಗೆ ಹೊಂದಬೇಕು. *ಅಂದರೆ ಬಾಲ್ಯದಲ್ಲಿ ಹೆಚ್ಚಾದ ಕಾಲವನ್ನು ವಿದ್ಯಾಭ್ಯಾಸಕ್ಕೂ ಮಿಕ್ಕ ಅಲ್ಪಸ್ವಲ್ಪ ಕಾಲವನ್ನು ಧರ್ಮಾರ್ಥಗಳಿಗೂ ಕಳೆಯಬೇಕು. ಇದರಂತೆಯೇ ಇತರ ಅವಸ್ಥೆಗಳಲ್ಲಿಯೂ ಎಂದು ತಿಳಿದುಕೊಳ್ಳಬೇಕು.

ಅಜರಾಮರವತ್ಪ್ರಾಜ್ಞೋವಿದ್ಯಾಮರ್ಥಂಚಸಾಧಯೇತ್॥
ಗೃಹೀತಇವಕೇಶೇಷುಮೃತ್ಯುನಾಧರ್ಮಮಾಚರೇತ್॥೬॥

ಟೀಕು—ಪ್ರಾಜ್ಞನಾದವನು ವಿದ್ಯವನ್ನೂ ಧನವನ್ನೂ ಮುಪ್ಪುಬರದವನಹಾಗೂ ಸಾವಿಲ್ಲದವನಹಾಗೂ ಸಂಪಾದಿಸಬೇಕು. ಅಂದರೆ, ವಿದ್ಯೆಯನ್ನೂ ಅರ್ಥವನ್ನೂ ಸಂಪಾದಿಸುವಾಗ, ತನಗೆ ಮುಪ್ಪೂ ಸಾವೂ ಇಲ್ಲವೆಂದೇ ನೆನಸಬೇಕು. ಮತ್ತು ಕೇಶಪಾಶವನ್ನುಹಿಡಿದು ಯಮನು ಯೆಳದುಕೊಂಡು ಹೋಗುತ್ತಿದ್ದಾನೆಂದು ನೆನದು ಧರ್ಮವನ್ನು ಮಾಡಬೇಕು. ಈಗ ಸಾಯುವಕಾಲವೆಂದುತಿಳಿದು ಧರ್ಮಮಾಡಬೇಕು. ಸ್ವಲ್ಪದಿವಸದಲ್ಲಿ ಸಾವುಬರುವದು ಗೊತ್ತಾದರೆ, ಯಾವನಾದರೂ ಸುಖಾನುಭವದಲ್ಲಿ ಯತ್ನಿಸದೆ ಶ್ರಮಪಟ್ಟಾದರೂ ವಿದ್ಯೆಕಲಿಯುತ್ತಾನೆಯೆ ? ಅಲ್ಲವೆ ಹಣವನ್ನು ಕೂಡ ಹಾಕುವನೆ ? ಶತ್ರುವು ಜುಟ್ಟನ್ನು ಹಿಡಿದು ಎಳದುಕೊಂಡು ಹೋಗುತ್ತಿರುವಾಗ ನಮ್ಮ ಸರ್ವಸ್ವದಾನದಿಂದ ತಪ್ಪಿಸಿಕೊಳ್ಳುವದಕ್ಕೆ ಪ್ರಯತ್ನ ಪಡುವಹಾಗೆ, ಯಮನು ನಮ್ಮನ್ನು ಎಳದುಕೊಂಡು ಹೋಗುತ್ತಿದ್ದಾನೆಂದು ಯೋಚಿಸಿಕೊಂಡರೆ, ಆತನ ಪಾಶದಿಂದ ತಪ್ಪಿಸಿಕೊಳ್ಳುವ ನಿಮಿತ್ತವಾಗಿಯಾದರೂನಮ್ಮಲ್ಲಿನ ಸರ್ವಸ್ವವನ್ನೂ ದಾನಮಾಡುತ್ತೇವೆ. * ನಮಗೆ ವಾರ್ಧಿಕ್ಯಮರಣಗಳಿಲ್ಲವೆಂದು ನೆನಸಿಕೊಂಡರೆ ಶಾಶ್ವತವಾದ ವಿದ್ಯವನ್ನು ಕಲಿಯುತ್ತೇವೆಂತಲೂ, ಯಮನ ಭೀತಿಯಿದ್ದರೆ ವಿಶೇಷದಾನಮಾಡುತ್ತೇವೆಂತಲೂ ಅಭಿಪ್ರಾಯ.

## ಉಪನ್ಯಾಸಶ್ರೇಣಿಕೆ

### ೨ ಧನದ ಆಯುವ್ಯಯವಿಷಯ.

ಈ ವಿಷಯದಲ್ಲಿ ಒಬ್ಬ ದೊಡ್ಡವಿದ್ವಾಂಸನು ‘ ನೀತಿವಾಕ್ಯಾಮೃತ ’ ವೆಂಬಗ್ರಂಥದಲ್ಲಿ

ಯತಃ ಸರ್ವಪ್ರಯೋಜನಸಿದ್ಧಿಃ ಸೋರ್ಥಃ । ಸಃ ಅರ್ಥಸ್ಯ ಭಾಜನಂ ಯಃ ಅರ್ಥಾನುಬಂಧೇನ ಅರ್ಥಮನುಭವತಿ. ’

ಅಂದರೆ -- ಸಕಲವಾದ ಇಷ್ಟಾರ್ಥಕ್ಕೆ ಸಿದ್ಧಿಯು ಯಾತರಿಂದ ಉಂಟಾಗುವದೋ ಅದೇ ಅರ್ಥವು. ಮುಂದಿನ ಶುಭಪರಿಣಾಮವನ್ನು ಊಹಿಸಿ, ಯಾವನು ಧನವನ್ನುಪಭೋಗಮಾಡುತ್ತಾನೆಯೋ, ಆತನೇ ಅರ್ಥಭಾಕ್ ಅಥವಾ ಧನಿಕನು ಎಂದು ಹೇಳುತ್ತಾನೆ. ಈ ಕವಿಯು ಸ್ವಲ್ಪಮಾತಿನಿಂದ ಆಯುವ್ಯಯ ವಿಷಯವಾಗಿ ಹೇಳಬೇಕಾದ್ದನ್ನೆಲ್ಲಾ ಹೇಳಿರುವನು. ಈತನು ಹೇಳಿರುವದನ್ನೇ ವಿಸ್ತರಿಸಿ ನಿರೂಪಿಸಿಹೇಳಿದರೆ ಸಾಕಾಗಿರುವದು.

ಧನದಿಂದ ಸಕಲ ಇಷ್ಟಾರ್ಥವು ಕೈಗೂಡುವದೆಂಬುವದನ್ನು ತೋರಿಸುವದಕ್ಕೆ ಭರ್ತೃಹರಿಯೆಂಬ ಕವಿಯು, ನೀತಿಶತಕದಲ್ಲಿ

ಯಸ್ಯಾಸ್ತಿ ವಿತ್ತಂ ಸನರಃ ಕುಲೀನಃ<br>
ಸಪಂಡಿತಃ ಸಶ್ರುತವಾನ್ ಗುಣಜ್ಞಃ॥<br>
ಸಏವವಕ್ತಾ ಸಚದರ್ಶನೀಯಃ।<br>
ಸರ್ವೇಗುಣಾಃ ಕಾಂಚನಮಾಶ್ರಯಂತಿ ॥

ಅಂದರೆ, ಧನವುಳ್ಳವನೇ ಕುಲೀನನು; ಆತನೇ ಗುಣಾವಗುಣಗಳನ್ನು ಚನ್ನಾಗಿ ಪರಿಶೀಲನೆಮಾಡತಕ್ಕ ಯೋಗ್ಯತೆಯುಳ್ಳವನು ; ಆತನೇ ಬಹಳವಾಗಿ ಶಾಸ್ತ್ರಗಳನ್ನು ಕೇಳಿರುವನು ; ಆತನೇ ಗುಣಜ್ಞನು; ಆತನೇ ಸಕಲವನ್ನು ಹೇಳತಕ್ಕವನು. ಆತನನ್ನೇ ತೋರಿಸಿ ಇವನ ಹಾಗೆ ನೀನು ಆಗೆಂದು ತಂದೆತಾಯಿಗಳು ತಮ್ಮ ತಮ್ಮ ಮಕ್ಕಳುಗಳಿಗೆ ಬುದ್ಧಿಕಲಿಸುವರು. ಆದ್ದರಿಂದ ಸಮಸ್ತಗುಣಗಳು ಧನವನ್ನೇ ಆಶ್ರಯಿಸಿರುವದೆಂದು ಹೇಳುತ್ತಾನೆ. ಹಣದಿಂದಲೇ ಸಕಲವೂ ಉಂಟಾಗುವದೆಂಬುವದನ್ನು ಚರಿತ್ರೆಗಳೂ ತಿಳಿಸುವವು. ಅದರ ಮೇಲ್ಮೆಯು ನಿತ್ಯದಲ್ಲಿಯೂ ನಮ್ಮ ಅನುಭವಕ್ಕೆ ಬರುತ್ತಿದೆ. ಆದ್ದ

ರಿಂದ ಧನಾರ್ಜನೆಯು ಅವಶ್ಯಕವಾಗಿ ಮಾಡತಕ್ಕದ್ದು. ಐಹಿಕಾಮುಷ್ಮಿಕಫಲಗಳೆರಡರ ಸಂಪಾದನೆಗೂ ಇದೇ ಕಾರಣವು.

ಧನಾರ್ಜನ ಮಾಡುವದಕ್ಕೆ ಕ್ರಮವನ್ನು ಹೇಳುವದಕ್ಕಾಗುವದಿಲ್ಲ. ಹೀಗೆ ಹಣಸಂಪಾದಿಸಬೇಕೆಂದು ಯಾವನೂ ಹೇಳಲಾರನು. ಯಾಕಂದರೆ : ಒಬ್ಬ ಮನುಷ್ಯನ ಶಕ್ತಿ ಒಬ್ಬನದಹಾಗಿಲ್ಲ ; ಒಬ್ಬನ ಬುದ್ಧಿ ಮತ್ತೊಬ್ಬನದಹಾಗಿಲ್ಲ ; ಮನುಷ್ಯನು ತನ್ನ ಶಕ್ತಿಯೂ ಬುದ್ಧಿಯೂ ಇದ್ದಂತೆ ಯತ್ನಮಾಡುವನು ; ಯತ್ನಕ್ಕೆ ಸರಿಯಾಗಿ ಫಲವನ್ನು ಹೊಂದುವನು. ಇದಲ್ಲದೆ ಒಬ್ಬನ ಅದೃಷ್ಟದಹಾಗೆ ಇನ್ನೊಬ್ಬನ ಅದೃಷ್ಟವಿರುವದಿಲ್ಲ ; ಒಬ್ಬನು ಯತ್ನಿಸಿದರೆ, ಶೀಘ್ರದಲ್ಲಿಯೇ ಕೈಗೂಡುವದು; ಇನ್ನೊಬ್ಬನು ಶ್ರಮಪಟ್ಟರೆ ವಿಘ್ನಗಳು ಪರಂಪರೆಯಾಗಿ ಬರುತ್ತಾ ಆ ಪ್ರಯತ್ನಗಳೆಲ್ಲಾ ವ್ಯರ್ಥವಾಗುವವು ; ಒಬ್ಬನಿಗೆ ಆರಂಭಕಾಲದಿಂದ ಪೂರ್ತಿಯಾಗುವ ತನಕ ಏನೇನೂ ವಿಘ್ನಬರುವದಿಲ್ಲ. ಆದ್ದರಿಂದ ಮನುಷ್ಯನು ಶಕ್ತ್ಯನುಗುಣವಾಗಿಯೂ ಅದೃಷ್ಟವಿದ್ದಂತೆಯೂ ಧನವನ್ನು ಹೊಂದುವನು. ಆದ್ದರಿಂದ ಅರ್ಥಾರ್ಜನಪ್ರಕಾರವು ಹೇಳಲಸಾಧ್ಯವು. ಆದರೂ ಧನಾರ್ಜನವಿಷಯದಲ್ಲಿ ಸ್ವಲ್ಪ ಹೇಳತಕ್ಕದ್ದು ಇಥೆ. ಏನೆಂದರೆ, ಧನಾರ್ಜನವು, ಧರ್ಮಕ್ಕೆ ಲೋಪಬರದ ಹಾಗೂ, ಧರ್ಮಾವಿರುದ್ಧವಾಗೂ ಮಾಡತಕ್ಕದ್ದೆಂಬುವದಾಗಿಥೆ. ಅಧರ್ಮದಿಂದ ಸಂಪಾದಿಸಿದ ಧನವು ಬಹುಕಾಲ ನಿಲ್ಲದೆ ಶೀಘ್ರದಲ್ಲಿಯೇ ನಾಶವಾಗುವದು. ಇದನ್ನು ಅನೇಕ ಕಡೆ ನಾವು ನೋಡಿರುವೆವು. ಅರ್ಥವನ್ನು ಧರ್ಮಮಾರ್ಗದಲ್ಲಿ ಸಂಪಾದಿಸದೆ, ಅಧರ್ಮದಿಂದ ಸಂಪಾದಿಸುವದಕ್ಕೆ ಯತ್ನಪಟ್ಟರೆ, ಅದರಿಂದ ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ದುಃಖ ಉಂಟಾಗುವದು. ಯಾಕಂದರೆ– ಅಧರ್ಮದಿಂದ ಧನಾರ್ಜನಮಾಡುವಾಗ, ಅನೇಕರಿಗೆ ಕೇಡನ್ನು ಬಯಿಸಬೇಕು, ಮತ್ತು ಮಾಡಬೇಕು. ಅದು ಗೊತ್ತಾದ್ದಲ್ಲಿ, ಅದರಿಂದ ರಾಜದಂಡನೆಯುಟಾಗುವದು ; ಅದುಗೊತ್ತಾಗದಿದ್ದಲ್ಲಿ ಸರ್ವೇಶ್ವರನಿಗೆ ಗೊತ್ತಾಗದಿರುವದು ಯಾವಾದೂಇಲ್ಲವಾದ್ದರಿಂದ ಪರಲೋಕದಲ್ಲಿ ಯಮದಂಡನೆಯುಂಟಾಗುವದು.

‘ ರಾಜಾಶಾಸ್ತಾದುರಾತ್ಮನಾಂ । ಅಂತಃಪ್ರಛನ್ನಪಾಪಾನಾಂ ಶಾಸ್ತಾವೈವಸ್ವತೋಯಮಃ ’

ಬಹಿರಂಗವಾಗಿ ಪಾಪಮಾಡಿದವರಿಗೆ ರಾಜನು ಶಿಕ್ಷಕನು, ಒಳಗೆ ಗೋಪ್ಯವಾಗಿ ಪಾಪಮಾಡಿದವರಿಗೆ ಸೂರ್ಯಪುತ್ರನಾದ ಯಮನು ಶಿಕ್ಷಕನು ಎಂದು ಶಾಸ್ತ್ರಗಳು ಮೊರೆ ಇಡುವವು.

ಧನವನ್ನು ವ್ಯಯಮಾಡುವ ರೀತಿಯು ಧನಾರ್ಜನದ ಹಾಗೆಯೇ ಬೇರೆಬೇರೆಯಾಗಿರುವದು. ವೆಚ್ಚಮಾಡುವಾಗಲೂ ಧರ್ಮಮಾರ್ಗವನ್ನೇ ಅವಲಂಬಿಸಬೇಕು. ಧನದ ಆಯ ವ್ಯಯ ಗಳೆರಡರಲ್ಲಿಯೂ ಶ್ರುತಿ ಸ್ಮೃತೀತಿಹಾಸಗಳು ನಮಗೆ ನಿಯಾಮಕಗಳಾಗಿರಬೇಕು.

ಧನವನ್ನು ವ್ಯಯ ಮಾಡುವದರಲ್ಲಿ ಬಹಳ ಹೇಳತಕ್ಕದ್ದಿದೆ. ನಮ್ಮಲ್ಲಿ ಕೆಲವರು ವಿವೇಕವಿಲ್ಲದೆ ಇದ್ದದ್ದನ್ನೆಲ್ಲಾ ದುರ್ವ್ಯಾಪಾರ ದಲ್ಲಿ ನಾಶಮಾಡುವರು. ಮತ್ತು ಕೆಲವರು ಧರ್ಮದ ವ್ಯಾಜವನ್ನಿಟ್ಟು ತಮ್ಮ ಪೂರ್ವಪುರುಷರು ಸಂಪಾದಿಸಿ ಇಟ್ಟದ್ದನ್ನೆಲ್ಲಾ ವ್ಯಯಮಾಡು ವರು. ಇನ್ನು ಕೆಲವರು ಶಾಸ್ತ್ರವನ್ನು ವಿಚಾರಿಸದೆ, ಸ್ವಾರ್ಥಪರ ರಾಗಿ ಇತರರ ಪ್ರಲೋಭನೆಯಿಂದಲೇ ದ್ರವ್ಯಾರ್ಜನೆಮಾಡಬೇಕೆಂದು ತಮ್ಮ ನಡೆನುಡಿಗಳಿಂದ ಶಾಸ್ತ್ರಜ್ಞರಂತೆ ತೋರಿಸಿ ಕೊಳ್ಳುವವರ ಮಾತಿನಲ್ಲಿ ವಿಶ್ವಾಸವಿಟ್ಟು, ಪಾತ್ರಾಪಾತ್ರವಿವೇಚನೆ ಮಾಡದೆ ವಿಶೇ ಷವಾಗಿ ವೆಚ್ಚಮಾಡುವದರಲ್ಲುದ್ಯುಕ್ತರಾಗಿ, ಹಿತೈಷಿಗಳು ಕೇಳು ವಲ್ಲಿ 'ನಮಗೆ ದಾರಿದ್ರ್ಯಬಂದರೂಬರಲಿ. ಇಲ್ಲಿನ ಸುಖವು ಹೋದರೂ ಹೋಗಲಿ. ಮುಂದಿನ ಲೋಕದಲ್ಲಿ ಸುಖ ಉಂಟಾದರೆ ಸಾಕು.' ಎಂದು ಹೇಳುವರು. ಅಯೋಗ್ಯರಲ್ಲಿ ಮಾಡಿದ ದಾನವು ತಮ್ಮನ್ನು ನರಕ ಕ್ಕೆಳೆಯುವದೆಂದು ಇವರು ಅರಿಯರು. ಇನ್ನು ಕೆಲವರು

'ಅರ್ಥಾಗೃಹೇ ನಿವರ್ತಂತೇ ಶ್ಮಶಾನೇ ಮಿತ್ರಬಾಂಧವಾಃ ||
ಸುಕೃತಂ ದುಷ್ಕೃತಂಚೈವ ಗಚ್ಛಂತಮನುಗಚ್ಛತಿ ।

ಅಂದರೆ ಧನಧಾನ್ಯಕನಕಾದಿ ವಸ್ತುಗಳು ಮನೆಯಲ್ಲೇ ನಿಲ್ಲುವವು. ಸ್ನೇಹಿತರೂ ಬಂಧುಗಳೂ ಶ್ಮಶಾನದ ತನಕ ಬಂದು ಅಲ್ಲಿನಿಲ್ಲುವರು. ಪುಣ್ಯಪಾಪಗಳೆರಡು ಮಾತ್ರ ಸತ್ತಮೇಲೂ ಬಿಡದೆ ಯಾವಾಗಲೂ ನಮ್ಮ ಹಿಂಬಾಲಿಸುವವು.' ಎಂದಿರುವದರಿಂದ ಪುಣ್ಯವನ್ನು ಅವಶ್ಯಕ ವಾಗಿ ಸಂಪಾದಿಸಬೇಕೆಂತಲೂ, ಪಾಪವನ್ನು ದಾನಧರ್ಮಗಳನ್ನು ಮಾ ಡುವದರಿಂದ ಕಳಕೊಳ್ಳಬೇಕೆಂತಲೂ, ಇವೆರಡಕ್ಕೂ ಧನವೇ ಮುಖ್ಯ ಸಾಧನವೆಂತಲೂ, ನಮ್ಮ ಆಪತ್ಕಾಲದಲ್ಲಿ ಅನುಕೂಲಿಸುವದಕ್ಕಾಗಿ ಧನವನ್ನು ಕೂಡಿಹಾಕಬೇಕೆಂತ ಎಲ್ಲಿಯೂ ಶಾಸ್ತ್ರಗಳಲ್ಲಿ ಹೇಳಿಲ್ಲ

ವೆಂತಲೂ ತಿಳಿದು ಸರ್ವಸ್ವವನ್ನೂ ನಾಶಮಾಡಿಕೊಳ್ಳುವರು. ಮತ್ತು ಕೆಲವರು ವಿವಾಹಾದಿ ಶುಭ ಕಾಲಗಳಲ್ಲಿ ತಮ್ಮ ಶಕ್ತಿಗೆ ಮೀರಿ ಸಾಲತೆಗದಾದರೂ ವಿಶೇಷವಾಗಿ ವ್ಯಯಮಾಡುವರು. ಇದರಿಂದ ಋಣವು ಉಂಟಾಗುವದು. ಅದು ಸಾಲಮಾಡಿ ಧರ್ಮಮಾಡಿದ್ದರಿಂದ ತಮಗೆ ಉಂಟಾದ ಪುಣ್ಯವಷ್ಟನ್ನೂ ಹೋಗಲಾಡಿಸುವದಲ್ಲದೆ, ತಮ್ಮನ್ನು ನರಕಕ್ಕೆ ಎಳೆಯುವದೆಂದು ತಿಳಿಯರು. ಇವೆಲ್ಲವೂ ಸರಿಯಲ್ಲ.

ಆದರೂ ಧರ್ಮಮಾಡುವದನ್ನು ಯಾರು ತಾನೆ ನಿಂದಿಸುವರು? ಅದನ್ನು ಸಕಲರೂ ಸ್ತೋತ್ರಮಾಡುವರು. ಶಾಸ್ತ್ರ ಬಲ್ಲವರು ಅಪಾತ್ರದಲ್ಲಿ ದಾನವನ್ನು ನಿಂದಿಸುವರು ; ಮಿತವ್ಯಯಮಾಡೆಂದು ಹೇಳುವರು. ಮನುಷ್ಯನು ಯೋಗ್ಯತೆಯನ್ನುನೋಡಿ ವ್ಯಯಮಾಡಬೇಕು. ಮೂರು ರೂಪಾಯಿ ತಿಂಗಳಿಗೆ ಸಂಪಾದಿಸತಕ್ಕವನನ್ನು ನೂರಾರು ರೂಪಾಯಿಗಳನ್ನು ಧರ್ಮನಿಮಿತ್ತವಾಗಿ ವ್ಯಯಮಾಡಬೇಕೆಂದು ಯಾವ ಶಾಸ್ತ್ರತಾನೇ ನಿರ್ಬಂಧಿಸುವದು. ಆದ್ದರಿಂದ ಮನುಷ್ಯನು ಮಿತವ್ಯಯವನ್ನು ಮಾಡಬೇಕು. ಈ ವಿಷಯದಲ್ಲಿ ದೂರಾಲೋಚನೆಯುಳ್ಳ ನಮ್ಮ ಪೂರ್ವೀಕರು ಬೋಧಿಸುವದೇನಂದರೆ: – ಸಂಪಾದಿಸುವ ದ್ರವ್ಯದಲ್ಲಿ ಕಾಲು, ಅಥವಾ ಅರ್ಧ, ಅಥವಾ ಮೂರಲ್ಲೊಂದು ಭಾಗವನ್ನು ಉಳಿಸಿ ಮಿಕ್ಕದ್ದನ್ನು ಉದರಭರಣಕ್ಕೂ ಐಹಿಕಾಮುಷ್ಮಿಕಶ್ರೇಯೋಭಿವೃದ್ಧಿಗೂ ವ್ಯಯಮಾಡಬೇಕು. ಹೀಗೆ ಉಳಿಸುವದಕ್ಕೇನೆ ವ್ಯಯಸಂಶೋಧನವೆಂದು ಹೇಳುವರು. ಯುಧಿಷ್ಠಿರನು ಧರ್ಮಾಸನವನ್ನೇರಿ ಒಡ್ಡೋಲಗದಲ್ಲಿದ್ದ ಕಾಲದಲ್ಲಿ ನಾರದಮುನಿಯು ಬಂದು, ರಾಜನೀತಿಯನ್ನು ಬೋಧಿಸುವತಾತ್ಪರ್ಯದಿಂದ ನೂರಾರು ಪ್ರಶ್ನೆಗಳನ್ನು ಕೇಳಿದನು. ಅವುಗಳಲ್ಲಿ

ಕಚ್ಚಿದಾಯಸ್ಯಚಾರ್ಧೇನ ಚತುರ್ಭಾಗೇನ ವಾ ಪುನಃ ||
ಪಾದಭಾಗೈಸ್ತ್ರಿಭಿರ್ವಾಪಿ ವ್ಯಯಸ್ಸಂಶೋಧ್ಯತೇತವ||

ಎಂಬುವದು ಒಂದು ಪ್ರಶ್ನೆಯಾಗಿತ್ತು. ಹೀಗೆ ಉಳಿಸಿದ ಹಣವು ನಮ್ಮ ಆಪತ್ಕಾಲಕ್ಕಾಗುವದು. ನಮಗೆ ಆಪತ್ತೆಂದರೇನು, ಎಂದು ಕೆಲವರು ಮದದಿಂದ ಆಡುವರು. ಸರ್ವಕಾಲದಲ್ಲಿಯೂ ನಾವು ಶ್ರೀಮಂತರಾಗಿರುವದಿಲ್ಲ. ನಮಗೆ ಕಷ್ಟಕಾಲ ಒದಗುವದು. ಆಗ ಹಣವಿಲ್ಲದಿದ್ದರೆ ನಾವುಪಡುವ ಶ್ರಮವು ಇಷ್ಟೆಷ್ಟೆಂದು ಹೇಳುವದಕ್ಕಾ

ಗುವದಿಲ್ಲ. ದಾರಿದ್ರ್ಯದಿಂದ ಪಾಪಮಾಡುವದರಲ್ಲಿ ಬುದ್ಧಿಹುಟ್ಟು ವದು. ಪಾಪಕರ್ಮಗಳನ್ನು ಮಾಡಿ, ತಿರಿಗಿ ದಾರಿದ್ರ್ಯವನ್ನು ಹೊಂದುವೆವು. ಅದರಿಂದ ಪುನಃ ಪಾಪಮಾಡುವೆವು. ಹೀಗೆ ನಮ್ಮಸ್ಥಿತಿಯು ಕೆಟ್ಟು ಹೋಗುತ್ತಾ ಬರುವದು. ಇದೂ ಅಲ್ಲದೆ, ಹಣವಿಲ್ಲದಿದ್ದ ಕಾಲದಲ್ಲಿ ನೀಚಸೇವೆ ನೀಚಸಹವಾಸಗಳು ಸಂಭವಿಸುವವು. ಅದರಿಂದ ಸ್ವರೂಪಹಾನಿಯುಂಟಾಗುವದು. ಅದರಿಂದ ನಮ್ಮ ಹುಟ್ಟುವಿಕೆಯು ವ್ಯರ್ಥವಾಗುವದು. ಹೀಗಿರುವದರಿಂದ ಆಪದರ್ಥವಾಗಿ ಹಣವನ್ನು ರಕ್ಷಿಸಲೇಬೇಕು. ಇದನ್ನು ತಿಳಿಸುವದಕ್ಕೆ 'ಆಪದರ್ಥೆ ಧನಂ ರಕ್ಷೇತ್' 'ದ್ರವಿಣಮಾಪದಿ' ಎಂಬ ಗಾದೆಗಳು ಪ್ರಚಾರದಲ್ಲಿರುವವು. ವ್ಯಯಸಂಶೋಧನದಿಂದ ಉಳಿಸಿದ ಹಣಕ್ಕೆ ಅನೇಕಪ್ರಯೋಜನಗಳುಂಟು. ಆಪತ್ಕಾಲಕ್ಕೆ ಒದಗುವದೊಂದು. ಪುತ್ರರು ತಂದೆಗಳನ್ನು ಋಣಕರ್ತರೆಂದು ಬೈಯ್ಯದೆ ಪ್ರೀತಿಯಿಂದಲೂ ಸಂತೋಷದಿಂದಲೂ ತಿಲೋದಕಕೊಟ್ಟು, ಉತ್ತಮಲೋಕಪ್ರಾಪ್ತಿಯುಂಟುಮಾಡುವದೊಂದು. ಪುತ್ರರು ದಾರಿದ್ರ್ಯದಿಂದ ನೀಚಕೃತ್ಯಗಳಿಗೆ ಬೀಳದೆ ಸನ್ಮಾರ್ಗದಲ್ಲಿ ನಡೆದು ಪಿತೃಗಳಿಗೆ ಕೇಡನ್ನುಂಟುಮಾಡದಿರುವದೊಂದು. ಕೈಯಲ್ಲಿ ಧನವು ಸಿದ್ಧವಾಗಿದ್ದರೆ, ಸಮಯದಲ್ಲಿ ಉಪಕಾರಮಾಡಬಹುದು, ಇದೊಂದು; ಧಾರಾಳವಾದ ಮನಸ್ಸಿನಿಂದ ದಾನ ಮಾಡಬಹುದು ಇದೊಂದು. ಹಣವಿದ್ದರೆ ಮನಸ್ಸಿಗೆ ಗಲಿಬಿಲಿಯಿಲ್ಲದೆ ಸಂತುಷ್ಟ ಇರುವದು, ಇದೊಂದು. ಧನವಿದ್ದರೆ, ಇಲ್ಲಿ ಬಹಳ ಗೌರವ ಉಂಟು, ಇದೊಂದು. ಹೀಗೆ ಇನ್ನೂ ಅನೇಕ ಉಪಯೋಗಗಳಿರುವವು.

ಕೌರವರೂ ಪಾಂಡವರೂ ಯುದ್ಧರಂಗದಲ್ಲಿ ಯುದ್ಧೋನ್ಮುಖರಾಗಿರಲು; ಧರ್ಮರಾಜನು ವಿನೀತವೇಷನಾಗಿ ತಮ್ಮಂದಿರೊಡನೆ ಪಾದಚಾರಿಯಾಗಿ ಭೀಷ್ಮಾಚಾರ್ಯರಿದ್ದರಥವನ್ನು ಪ್ರದಕ್ಷಿಣೆಮಾಡಿ, ಅವರಿಗೆ ಅಭಿವಾದನಮಾಡಿ, ಅಂಜಲಿಬದ್ಧನಾಗಿ ನಿಲ್ಲಲು; ಭೀಷ್ಮಾಚಾರ್ಯರು—

ಅರ್ಥಸ್ಯ ಪುರುಷೋದಾಸಃ ದಾಸಸ್ತ್ವರ್ಥೋನಕಸ್ಯಚಿತ್॥
ಇತಿಸತ್ಯಂ ಮಹಾರಾಜ ಬದ್ಧೋಸ್ಮ್ಯರ್ಥೆನ ಕೌರವೈಃ॥
ಅತಸ್ತ್ವಾಂ ಕ್ಲೀಬವದ್ವಾಕ್ಯಂ ಬ್ರವೀಮಿ ಕುರುನಂದನ॥
ಬದ್ಧೋಸ್ಮ್ಯರ್ಥೆನ ಕೌರವ್ಯೈಃ ಯುದ್ಧಾದನ್ಯತ್ಕಿಮಿಚ್ಛಸಿ॥

ಎಲೈ ಮಹಾರಾಜನೆ, ಹಣಕ್ಕೆ ಮನುಷ್ಯನು ಆಳು. ಹಣವು ಒಬ್ಬನಿಗೂ ಆಳಲ್ಲ. ಇದು ನಿಜವು. ಕೌರವರಿಂದ ಹಣದ ಮೂಲಕ

ಕಟ್ಟಿಬಿಟ್ಟೆನು. ಆದ್ದರಿಂದ ಹೇಡಿಯಂತೆ ನುಡಿಯುವೆನು. ಅವರ ಹಣದಿಂದ ಜೀವಿಸಿದವನಾದ್ದರಿಂದ ಯುದ್ಧವನ್ನು ಬಿಟ್ಟು ಮತ್ತೇನಿಚ್ಛಿಸುವಿ?' ಎಂದು ಹೇಳಿದರು. ಹೀಗೆಯೇ ದ್ರೋಣಕೃಪಾಶ್ವತ್ಥಾಮರು ನಮಸ್ಕರಿಸಿ ರಥದ ಬಳಿಯಲ್ಲಿ ನಿಂತಿರುವ ಧರ್ಮರಾಜನಿಗೆ ಹೇಳುತ್ತ ಬಂದರು. ಇವರು ತಪೋನಿಷ್ಠರು, ಜ್ಞಾನವೃದ್ಧರು, ಸಕಲಶಾಸ್ತ್ರಗಳನ್ನು ಬಲ್ಲವರು, ಮಹಾಶೂರರು. ದುರ್ಯೋಧನಾದಿಗಳ ಶಕ್ತಿಗೂ ಇವರ ಶಕ್ತಿಗೂ ಹುಲ್ಲುಕಡ್ಡಿಗೂ ಬ್ರಹ್ಮಾಸ್ತ್ರಕ್ಕೂ ಇರುವ ತಾರತಮ್ಯ ಉಂಟು. ಆದರೂ ಕೂಡ ನೀಚನಾದ ದುರ್ಯೋಧನನಿಗೆ ವಶರಾದರು. ಅವನ ತಪ್ಪನ್ನೆಲ್ಲಾ ಒಳಹಾಕಿಕೊಂಡರು. ಪಾಂಡವಶ್ರೇಷ್ಠನಾದ ಧರ್ಮರಾಯನು ಬಹುಧರ್ಮಿಷ್ಠನು ಸತ್ಯಸಂಧನು, ಗುಣಾಢ್ಯನು. ಹೀಗಿದ್ದರೂ ಕೂಡ ರಾಜ್ಯಭ್ರಷ್ಟನಾದ್ದರಿಂದ ಆತನನ್ನು ದೂರದಲ್ಲಿ ಬಿಟ್ಟರು. ಪಾಂಡವರಲ್ಲಿ ಸಂಪತ್ತಿರಲಿಲ್ಲವಾಗಿ ಭೀಷ್ಮಾದಿಗಳು ಸಹಾಯಮಾಡದೆಹೋದದ್ದಲ್ಲದೆ ಪ್ರತಿಯಾಗಿಯೂ ನಿಂತು ಯುದ್ಧಮಾಡಿದರು. ಕೌರವರಲ್ಲಿ ಧನವಿದ್ದರಿಂದ ಭೀಷ್ಮಾದಿಗಳು ಅವರಲ್ಲಿದ್ದ ತಪ್ಪುಗಳನ್ನು ಮನ್ನಿಸಿದ್ದಲ್ಲದೆ ಅಧರ್ಮದಿಂದ ಅವರ ರಾಜ್ಯವನ್ನು ಕಿತ್ತುಕೊಂಡು ನಾಶಮಾಡಬೇಕೆಂದು ಬಗೆದು ಯುದ್ಧಮಾಡಲು ಅದಕ್ಕೂ ಸಹಾಯಮಾಡಿದರು. ಧನದನಿಮಿತ್ತವಾಗಿ ಧರ್ಮಜ್ಞರಾದ ಭೀಷ್ಮಾದಿಗಳೂ ಕೂಡ ಅಧರ್ಮದಲ್ಲಿ ಪ್ರವರ್ತಿಸಿದರು. ದುರ್ಯೋಧನನು ನೀಚನಾದರೂ ಐಶ್ವರ್ಯ ಅವನಲ್ಲಿದ್ದುದ್ದರಿಂದ ಆಜ್ಞೋಲ್ಲಂಘನೆಮಾಡದೆ ಅವನನ್ನೇ ಉಪಸರ್ಪಣೆಮಾಡುತ್ತಿದ್ದರು. ಹೀಗಿರಲು ಧನವುಳ್ಳವನ ಮೇಲ್ಮೆಯನ್ನು ಯಾರುತಾನೆ ವರ್ಣಿಸಬಲ್ಲರು. ಹಣದವಿಷಯದಲ್ಲಿಎಷ್ಟುಜಾಗ್ರತೆಯನ್ನಿಡಬೇಕೋ ಅದನ್ನು ನೀವೇ ಯೋಚಿಸಿಕೊಳ್ಳಿರಿ. ಆದಾಗ್ಯೂ ಕೆಲವರು ಕುಡಿಯುಲ್ಲಿಯೂ, ಆಟಗಳಲ್ಲಿಯೂ, ವೇಶ್ಯಾಂಗನೆಯರಲ್ಲಿಯೂ, ತಾವಾಗಲಿ, ತಮ್ಮ ಪೂರ್ವೀಕರಾಗಲಿ, ಶ್ರಮದಿಂದ ಆರ್ಜಿಸಿದ ಹಣವನ್ನು ನೀರಿನಂತೆ ಚೆಲ್ಲುವರು. ಇವುಗಳೇ ಮನುಷ್ಯನಿಗೆ ಪ್ರಮಾದಸ್ಥಾನಗಳು.

ಈ ಪ್ರಮಾದಗಳಿಗೆ ಶಿಕ್ಕದೆ, ಸಂಪಾದಿಸಿದ ದ್ರವ್ಯಕ್ಕೆ ವ್ಯಯಸಂಶೋಧನೆ ಮಾಡಿ, ಉಳಿದ್ದನ್ನು ಐಹಿಕಾಮುಷ್ಮಿಕಸುಖಸಂಪಾದನೆಯಲ್ಲಿ ಧರ್ಮಮಾರ್ಗಕ್ಕನುಸಾರವಾಗಿ ವ್ಯಯ ಮಾಡಬೇಕು.